ಶ್ರೀ ಎಸ್. ಸುಬ್ಬಯ್ಯನಾಯಕ್.—ಇಂತಹ ಉಪಾಧ್ಯಾಯರ ಹೆಸರುಗಳು ಎಂದು ಅವರಿಗೆ ಹೇಗೆ ಗೊತ್ತಾಗಬೇಕು ?

ಶ್ರೀ ಎಸ್. ಆರ್. ಕಂಠಿ.—ಆಯಾ ಜಿಲ್ಲೆಯಲ್ಲಿರುವ ಅಧಿಕಾರಿಗಳಿಗೆ ಮತ್ತು ಅಲ್ಲಿ ಪ್ರಭಾವ ಶಾಲಿಗಳಾಗಿರುವವರಿಗೆ ಅಲ್ಲಿರುವ ಉಪಾಧ್ಯಾಯರುಗಳ ಹೆಸರುಗಳು ಗೊತ್ತಿರುತ್ತದೆ. ಅವರು ನೋಡಿ ಆರಿಸಿ ಸಲಹೆ ಮಾಡುತ್ತಾರೆ.

ಶ್ರೀ ಎಸ್. ಸುಬ್ಬಯ್ಯ ನಾಯಕ್.—63-64 ರಲ್ಲಿ ಮತ್ತು 64-65 ರಲ್ಲಿ ಯಾರಿಗೂ ನಮ್ಮ ಭಾಗದಲ್ಲಿ ಅವಾರ್ಡು ಸಿಗಲಿಲ್ಲ. ಇಲ್ಲಿ 20 ವರ್ಷಗಳಷ್ಟು ಸರ್ವಿಸ್ಸಾದ ಉಪಾಧ್ಯಾಯರುಗಳು ಸಿಗಲಿಲ್ಲವೇ ?

ಶ್ರೀ ಎಸ್. ಆರ್. ಕಂಠಿ.—ಇದ್ದರು. 63-64 ರಲ್ಲಿ 20 ವರ್ಷಗಳಷ್ಟು ಸರ್ವಿಸ್ಸಾದವರು ಯಾರೂ ಇರಲಿಲ್ಲ. 64-65 ರಲ್ಲಿ 20 ವರ್ಷಗಳಷ್ಟು ಸರ್ವಿಸ್ಸಾದವರನ್ನು ಕೇಂದ್ರ ಸರಕಾರದವರಿಗೆ ಕಳುಹಿಸಿಕೊಟ್ಟಿದ್ದರೂ ಕೂಡ ಅವರು ಅವಕ್ಕೆ ಒಪ್ಪಿಗೆಯನ್ನು ಕೊಡಲಿಲ್ಲ.

Sri S. RAJAGOPAL.—May I know the number of teachers who have received this national award in 1964-65 ?

ಶ್ರೀ ಎಸ್. ಆರ್. ಕಂಠಿ —ಸಿತ್ ಕ್ಯಾನರಾ ಜಿಲ್ಲೆಗೆ ಮಾತ್ರ ಸಂಬಂಧಿಸಿದಂತೆ ಮಾತ್ರ ವಿವರ ಗಳು ಇಲ್ಲವೆ. ದೇಶದ ಎಲ್ಲ ಭಾಗದ ಪ್ರಶ್ನೆ ಇದರಲ್ಲಿ ಬರುವುದಿಲ್ಲ ಮತ್ತು, ಆ ಇನ್‌ಫರುಮೇಷನ್ನು ಈಗ ಇಲ್ಲಲ್ಲ.

ಶ್ರೀ ಸಿದ್ದಯ್ಯ ಕಾಶೀಮಠ್.—ಪ್ರಶಸ್ತಿಗಳನ್ನು ಕೊಡುವಾಗ ಯಾವ ಯಾವ ನೀತಿ ನಿಯಮ ಗಳನ್ನನುಸರಿಸಿ ಕೊಡುತ್ತೀರಿ ?

ಶ್ರೀ ಎಸ್. ಆರ್. ಕಂಠಿ.—20 ವರ್ಷಗಳಷ್ಟು ಸರ್ವಿಸ್ಸಾಗಿರಬೇಕು ಲೌವ್ ಆಫ್ ಚಿಲ್ಡ್ರನ್ ಇರಬೇಕು, ಇಂಟರೆಸ್ಟ್ ಇನ್ ಸೋಷಿಯಲ್ ಲೈಫ್ ಇರಬೇಕು, ಹಾಗೂ ಎಫಿಷಿಯೆನ್ಸಿ ಇನ್ ಟೀಚಿಂಗ್ ಇತ್ಯಾದಿಗಳೆಲ್ಲವೂ ಇರಬೇಕು.

Breach of Suvarnamukhi Dam

*Q.—265. Sri ANDANAIAH (Kunigal).—

Will the Government be pleased to state :—

(*a*) when the Suvarnamukhi Dam was constructed ;

(*b*) the estimated cost of the above dam ;

(*c*) the reasons for its breach ;

(*d*) whether the authorities have enquired into it and submitted any report to the Government ;

(*e*) whether Government have taken any action against any officer in this behalf ?

A.—Sri ALUR HANUMANTHAPPA (Deputy Minister for Minor Irrigation).—

(*a*) Anecut was constructed during 1952-56.

(*b*) Rs. 1,65,310.

(*c*) Unprecedented floods.

(*d*) Yes.

(*e*) No.

ಶ್ರೀ ಅಂದಾನಯ್ಯ.—(ಡಿ) ಗೆ ಉತ್ತರವಾಗಿ ರಿಪೋರ್ಟು ಬಂದಿದೆ ಎಂದು ಹೇಳಿದ್ದೀರಿ. ಅದರಲ್ಲಿರತಕ್ಕ ಸಂಗತಿಗಳನ್ನು ಈ ಸಭೆಯ ಮುಂದೆ ತಿಳಿಸುತ್ತೀರಾ ?

†ಶ್ರೀ ಆಲೂರು ಹನುಮಂತಪ್ಪ.—ಅಲ್ಲಿನ ಡಿವಿಜನ್ನು ಇಂಜನೀಯರುಗಳು ಪರೀಕ್ಷೆ ಮಾಡಿ, ಆಗ ವಿಪರೀತವಾಗಿ ಹೆಚ್ಚು ಮಳೆ ಬಂದು ಪ್ರವಾಹ ಹೆಚ್ಚಾದುದರಿಂದ ಈ ಕೆರೆಯೊಳಕ್ಕೆ ಹೆಚ್ಚು ನೀರು ಬಂದು ಡ್ಯಾಮೇಜು ಜಾಸ್ತಿಯಾಗಿ ಇಲ್ಲಿನ ಕೆರೆ ಒಡೆಯಲು ಕಾರಣವಾಯಿತು ಎಂದು ಮತ್ತಿತರ ಸಕಾರಣಗಳನ್ನೂ ಅವರ ವರದಿಯಲ್ಲಿ ತಿಳಿಸಿದ್ದಾರೆ.

ಶ್ರೀ ಅಂದಾನಯ್ಯ.—ಇದರಲ್ಲಿ ಡಿಫೆಕ್ಟಿವ್ ಡಿಸೈನು ಮಾಡಿದುದರಿಂದ ಇಲ್ಲಿನ ಕಟ್ಟೆ ಒಡೆದು ಹೋಯಿತು ಎನ್ನುವುದು ನಿಜವೇ ?

ಶ್ರೀ ಆಲೂರು ಹನುಮಂತಪ್ಪ.—ಡಿಫೆಕ್ಟೀವ್ ಡಿಸೈನ್‌ನಿಂದೇನೂ ಅಲ್ಲ, ಅದರ ಕ್ಯಾಚ್‌ಮೆಂಟು ಏರಿಯಾ ದೊಡ್ಡದು. ಇದರ ಜೊತೆಗೆ ಮೊದಲು ಮಾಡಿದ್ದ ಡಿಸೈನಿನಂತೆ 12,540 ಕ್ಯುಸೆಕ್ಸ್‌ನಷ್ಟು ನೀರಿನ ಕೃಪಾಸಿಟಿಗಾಗಿ ಇತ್ತು. ಆದರೆ ಅದಕ್ಕೆ ಮೊದಲ ದಿನ ಹಿಂದಿಗಿಂತ ವಿಪರೀತವಾಗಿ ಎಂದರೆ ನಮಾರು 4·25 ಇಂಚುಗಳಷ್ಟು ಮಳೆ ಬಂದುದರಿಂದ ಮತ್ತು ಅದೇ ರೀತಿ ದೇಶದ ನಾನಾ ಭಾಗ ಗಳಲ್ಲಿಯೂ ಹೆಚ್ಚು ಮಳೆ ಬಂದುದರಿಂದ ಇಲ್ಲಿಯೂ ಕೂಡ ಡ್ಯಾಮೇಜು ಆಗಿದೆ.

ಶ್ರೀ ಬಿ. ಚನ್ನಬೈರೇಗೌಡ.—ಕ್ಯಾಚ್‌ಮೆಂಟು ಏರಿಯಾ ಎಷ್ಟು ಎಂದು ನೋಡಿಕೊಂಡು ಎಸ್ಟಿಮೇಟನ್ನು ತಯಾರು ಮಾಡದೆ ಅದನ್ನು ಮಂಜೂರು ಮಾಡಿದ ಇಂಜನೀಯರುಗಳು ಯಾರು ?

ಶ್ರೀ ಆಲೂರು ಹನುಮಂತಪ್ಪ.—ಕ್ಯಾಚ್‌ಮೆಂಟು ಏರಿಯಾವನ್ನು ಗಮನದಲ್ಲಿಟ್ಟುಕೊಂಡೇ ಅಂದಾಜುಗಳನ್ನು ತಯಾರು ಮಾಡುವುದು. ಆದರೆ ಆಗ ಮಳೆ ಜಾಸ್ತಿ ಬಂದುದರಿಂದಾಗಿ ಪ್ರವಾಹವೂ ಜಾಸ್ತಿ ಬಂದು ಇಲ್ಲಿ ನಷ್ಟವಾಯಿತು.

ಶ್ರೀ ಸಿ. ಆರ್. ರಂಗೇಗೌಡ.—ಕ್ಯಾಚ್‌ಮೆಂಟು ಏರಿಯಾ ದೊಡ್ಡದಾಗಿದ್ದರೆ ಕೇಂದ್ರ ಸರಕಾರದ ಆದೇಶದಂತೆ ಇಲ್ಲಿ ದೊಡ್ಡ ಅಣೆಕಟ್ಟನ್ನು ಮೇಜರ್ ಡ್ಯಾಂ ಅನ್ನು ಏಕೆ ಮಾಡಬಾರದು ?

ಶ್ರೀ ಆಲೂರು ಹನುಮಂತಪ್ಪ.—ಆಗಾಗ್ಗೆ ಸರಕಾರ ಅದರ ಬಗ್ಗೆ ತಕ್ಕ ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತಿದೆ. ಅದರಂತೆ ಎಲ್ಲೆಲ್ಲಿ ದೊಡ್ಡ ಅಣೆಕಟ್ಟನ್ನು ಕಟ್ಟಲು ಸಾಧ್ಯವೋ ಅಂತಹ ಕಡೆ ಗಳಲ್ಲಿ ಕಟ್ಟೆಗಳನ್ನು ನಿರ್ಮಾಣಮಾಡಬೇಕೆಂದೇನೋ ಇದೆ.

ಶ್ರೀ ಜಿ. ರಾಮೇಗೌಡ.—ಇದರಿಂದ ಅಲ್ಲಿ ರೈತರಿಗೆ ಆಗುತ್ತಿರುವ ನಷ್ಟವೆಷ್ಟು ?

ಶ್ರೀ ಆಲೂರು ಹನುಮಂತಪ್ಪ.—ಇದರ ಅಂದಾಜು ಸಹ ನಡೆಯುತ್ತಿದೆ. ಅದರ ಬಗ್ಗೆ ನಮಗೆ ಇನ್ನೂ ಪೂರ್ಣವಾದ ವರದಿ ಬಂದಿಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಡಿಫೆಕ್ಟಿವ್ ಡಿಸೈನು ಆಗಿತ್ತು ಮತ್ತು ಅಲ್ಲಿ ಹೆಚ್ಚು ಮಳೆ ಬಂದುದರಿಂದ ನೀರಿನ ಪ್ರವಾಹ ಹೆಚ್ಚು ಬಂದುದರಿಂದ ಕಟ್ಟೆ ಒಡೆದುಹೋಯಿತು ಎಂದು ಹೇಳಿದಿರಿ. ಇಲ್ಲಿ ಹೆಚ್ಚು ಅಚ್ಚುಕಟ್ಟು ಬರುತ್ತದೆ ಎಂದಿರುವಾಗ ಎಸ್ಟಿಮೇಟು ಹಾಗೂ ಡಿಸೈನುಗಳನ್ನು ತಯಾರು ಮಾಡುವಾಗ ಇಂಜನೀಯರುಗಳು ಸರಕಾರಕ್ಕೆ ಸರಿಯಾದ ಸಲಹೆಗಳನ್ನೇತಕ್ಕೆ ಮಾಡಬಾರದಾಗಿತ್ತು?

ಶ್ರೀ ಆಲೂರು ಹನುಮಂತಪ್ಪ.—ಅಂದಾಜು ಹಾಗೂ ಡಿಸೈನುಗಳನ್ನು ತಯಾರು ಮಾಡುವಾಗ ಅಲ್ಲಿನ ಇಂಜನಿಯರುಗಳು ಅದಷ್ಟು ಸರಕಾರಕ್ಕೆ ಕಡಿಮೆ ಖರ್ಚಿನಲ್ಲಿ ಮಾಡಬೇಕೆಂದು ಎಸ್ಟಿಮೇಟು ಗಳನ್ನು ತಯಾರಿಸಿ ಕಳುಹಿಸಿದ್ದರು. ಆದರೆ ರಾಷ್ಟ್ರಾದ್ಯಂತವೂ ದೊಡ್ಡದಾಗಿ ಮಳೆ ಹಾಗೂ ಪ್ರವಾಹ ಗಳು ಬಂದುದರಿಂದ ಈಗ ಇಲ್ಲಿ ದೊಡ್ಡ ರಿಸರ್ವಾಯರನ್ನು ಕಟ್ಟಬೇಕೆಂದು ಸಲಹೆ ಬಂದಿದೆ. ಅದನ್ನು ಕಟ್ಟಬೇಕು ಎನ್ನುವ ಕಡೆಗೆ ಪ್ರಯತ್ನ ಮಾಡುತ್ತೇವೆ.

ಶ್ರೀ ಹೆಚ್. ಆರ್. ಕೇಶವಮೂರ್ತಿ. ನಮ್ಮ ದೇಶದಲ್ಲಿ ಈ ಸಾರಿ ಫ್ಲಡ್ ಡ್ಯಾಮೇಜುಗಳಿಂದ ಬಹಳ ಹಾನಿಯುಂಟಾಗಿದೆ. ಇದರ ಬಗ್ಗೆ ಸರಕಾರ ಏನೇನು ಕಾರ್ಯಕ್ರಮಗಳನ್ನು ತೆಗೆದುಕೊಳ್ಳ ಬೇಕೆಂದು ಆಲೋಚನೆ ಮಾಡುತ್ತಿದ್ದೀರಿ ?

ಶ್ರೀ ಆಲೂರು ಹನುಮಂತಪ್ಪ.—ಈ ಸಾರಿ ಮಳೆ ಹೆಚ್ಚಾಗಿ ಬಂದುದರಿಂದಾಗಿ ಈ ರೀತಿ ಯಾಗಿದೆ. ಅದಕ್ಕೋಸ್ಕರ ಎಲ್ಲೆಲ್ಲಿ ಸಾಧ್ಯವೋ ಅಲ್ಲೆಲ್ಲಾ ದೊಡ್ಡ ದೊಡ್ಡ ಜಲಾಶಯಗಳನ್ನು ನಿರ್ಮಾಣ ಮಾಡಬೇಕೆಂದು ಇದೆ. ಆದರೆ ಫ್ಲಡ್ ಡ್ಯಾಮೇಜಾದಾಗ ಅದಕ್ಕಾಗಿ ಫ್ಲಡ್ ಬೋರ್ಡು ಇದೆ ಮತ್ತು ಫ್ಲಡ್ ಕಂಟ್ರೋಲ್ ಸ್ಕೀಮ್ಸ್ ಮೂಲಕ ತಕ್ಕ ಕಾರ್ಯಕ್ರಮಗಳನ್ನು ತೆಗೆದುಕೊಳ್ಳು ತ್ತಾರೆ.

1-30 P. M.

ಶ್ರೀ ಬಿ. ಚನ್ನಬೈರೇಗೌಡ.—ಕ್ಯಾಚ್‌ಮೆಂಟ್ ಪ್ರದೇಶ ಜಾಸ್ತಿ ಇದ್ದು ಪ್ರವಾಹ ಜಾಸ್ತಿ ಬಂದು ಒಡೆದು ಹೋಯಿತು ಎಂದು ಹೇಳಿದಿರಿ, ಇನ್ನೂ ಮೇಲೆ ಡ್ಯಾಮ್ ಕಟ್ಟಿ ಅಲ್ಲಿಂದ ನೀರು ತೆಗೆದುಕೊಳ್ಳುವುದಕ್ಕವಕಾಶವಿಲ್ಲವೆ?

ಅಧ್ಯಕ್ಷರು.—ಅದಕ್ಕಾಗಲೇ ಉತ್ತರ ಹೇಳಿದ್ದಾರೆ.

ಶ್ರೀ ಸಿ. ಆರ್. ರಂಗೇಗೌಡ.—ಬಹಳ ಹೆಚ್ಚು ಭಾಗ ಬ್ರೀಡ್ ಆಗಿದೆ, ಕೆಳಗಿನ ಪ್ರದೇಶದಲ್ಲಿ ಕಟ್ಟಬೇಕೆಂದು ಏನು ಯೋಚನೆ ಮಾಡಿದೆಯೋ ಅದರಿಂದ ಉತ್ಯುಷ್ಟವಾದ ಹೆಚ್ಚು ಜಮೀನು ಮುಳುಗಡೆಯಾಗುತ್ತದೆ ಎಂದೂ ಅದರಿಂದ ಆಪ್‌ಸೆಟ್‌ನಲ್ಲಿ ಕಟ್ಟಬೇಕೆಂದೂ ಅಭಿಪ್ರಾಯ ಪಟ್ಟು ಜನರಿಂದ ಮನವಿ ಬಂದಿಲ್ಲವೆ?

ಶ್ರೀ ಆಲೂರು ಹನುಮಂತಪ್ಪ.—ಒಡೆದು ಹೋಗಿರುವುದನ್ನು ರಿಪೇರಿ ಮಾಡುವುದಕ್ಕೆ ಅವಕಾಶವಿದೆಯೆ ಎಂಬುದನ್ನೂ ಪರಿಶೀಲನೆ ಮಾಡುತ್ತಿದ್ದೇವೆ.

ಶ್ರೀ ಎಚ್. ಡಿ. ದೇವೇಗೌಡ.—ಹಿಂದಿನ ಪ್ರವಾಹದಿಂದ ಒಡೆದು ಹೋಯಿತು ಎಂದು ಹೇಳಿದರು, ಅದರ ಕಟ್ಟಡದಲ್ಲಿ ಏನಾದರೂ ನ್ಯೂನತೆ ಇತ್ತೆ ಎಂಬ ಬಗ್ಗೆ ಸೂಪರಿಂಟೆಂಡಿಂಗ್ ಇಂಜಿನಿಯರ ವರದಿಯನ್ನು ತೆಗದುಕೊಂಡಿದ್ದೀರ?

ಶ್ರೀ ಆಲೂರು ಹನುಮಂತಪ್ಪ.—ಅದನ್ನೆಲ್ಲ ಮಾಡಿದೆ.

Societiies Registered in Tumkur District for constructing Houses to Scheduled Castes and Scheduled Tribes

*Q.—196. Sri R. KENCHAPPA (Pavagada).—

Will the Government be pleased to state :—

(*a*) the number of Societies registered in Tumkur District since 1962 for constructing houses to Scheduled Castes and Scheduled Tribes (Taluk-wise information may be furnished) ;

(*b*) the total number of loan applications received by Government so far from the said Societies together with the amount of loan asked for (Taluk-wise information may be furnished) ;

(*c*) the names of the Societies to which loan has been sanctioned together with the amount sanctioned ?

A.—Sri RAMAKRISHNA HEGDE (Minister for Development, Panchayat Raj and Co-operation).—

(*a*) Eleven—Talukwise information is furnished below :—

Tumkur Taluk	...	1
Koratagere	...	1
Tiptur	...	1
Kunigal	...	2
Sira	...	1
Pavagada	...	1
Madhugiri	...	1
Chicknayakanhalli	...	1
Gubbi	...	1
Thuruvekere	...	1

(*b*)

Taluk	*No. of applications*	*Amount Rs.*
(1) Kunigal	85	2,02,000
(2) Tiptur	34	42,800
(3) Pavagada	9	19,700